





# ಕೇಸರಿ ಇರುವೆ

## ಜೇನು ಕೃಷಿಯ ಹೊಸ ಸಂಕಷ್ಟ

ಚಿತ್ರ– ಬರಹ:
**ಕುಮಾರ್ ಪೆರ್ನಾಜೆ**

ಜೇನು ಎಂದಾಕ್ಷಣ ಎಲ್ಲರ ಬಾಯಲ್ಲಿ ನೀರೂರುತ್ತದೆ. ಆದರೆ ಮನುಷ್ಯ ಮಾತ್ರವಲ್ಲ, ಜೇನಿಗೆ ಇರುವೆ, ಹಲ್ಲಿ, ಓತಿಕ್ಯಾತ, ಗೆದ್ದಲು, ಕಣಜ ಹುಳ, ಕರಡಿ, ಮಂಗ, ಚಿಪ್ಪು ಹಂದಿ, ಮುಳ್ಳು ಹಂದಿಗಳೂ ದಾಳಿ ಇಡುತ್ತವೆ! ಜೇನಿಗೆ ಶತ್ರುಗಳ ಸಂಖ್ಯೆ ಜಾಸ್ತಿ. ಈ ಶತ್ರುಗಳಿಂದ ಜೇನುಕೃಷಿಯನ್ನು ರಕ್ಷಿಸಲು ಜೇನು ಕೃಷಿಕ ಸತತ ಪ್ರಯತ್ನಗಳನ್ನು ನಡೆಸಬೇಕಾಗುತ್ತದೆ.

ಪ್ರಕೃತಿಯ ವೈಪರೀತ್ಯ ಉಂಟಾದಾಗ ತಮ್ಮ ನೋವನ್ನು ಇತರ ಜೀವಿಗಳ ಮೇಲೆ ತೋರ್ಪಡಿಸುವುದು ಕೀಟಗಳ ಅಭ್ಯಾಸವಿರಬೇಕು. ಪ್ರಕೃತಿ ವೈಪರೀತ್ಯದ ಮುನ್ಸೂಚನೆ ಪ್ರಾಣಿ, ಪಕ್ಷಿಗಳಿಗೆ ಮೊದಲು ತಿಳಿಯುತ್ತದೆ ಎನ್ನುವವರಿದ್ದಾರೆ. ಜೇನು ಹುಟ್ಟಿಗೆ ಕೇಸರಿ ಇರುವೆಗಳು ದಾಳಿ ಮಾಡುತ್ತಿರುವುದು ಇಂತಹದ್ದೇ ಪ್ರಕೃತಿಯ ವೈಪರೀತ್ಯದ ಮುನ್ಸೂಚನೆ ಇರಬಹುದೆ ಎನ್ನುವುದೀಗ ಜೇನು ಕೃಷಿಕರನ್ನು ಕಾಡುತ್ತಿರುವ ಪ್ರಶ್ನೆ.



ಜೇನು ಕೃಷಿಕರು ತಮ್ಮಲ್ಲಿರುವ ಜೇನು ಕುಟುಂಬಗಳನ್ನು ಪ್ರತ್ಯೇಕಿಸಿ, ಪಾಲು ಮಾಡಿ ಕುಟುಂಬಗಳನ್ನು ಹೆಚ್ಚಿಸಿಕೊಳ್ಳುವ ಸಮಯವಿದು. ಜೇನು ಕುಟುಂಬಗಳು ಗೂಡಿನ ತುಂಬ ಮೊಟ್ಟೆ ಮರಿಗಳನ್ನಿಟ್ಟು ಸಧೃಡವಾಗಿ ಬೆಳೆಯುತ್ತಿರುವಾಗಲೇ ಇದೀಗ ಕೇಸರಿ ಇರುವೆಗಳ ಹೊಸ ದಾಳಿ ಶುರುವಾಗಿದೆ. ಈ ಹಿಂದೆ ಒಂದು, ಎರಡು ಕುಟುಂಬಗಳಿಗೆ ಮಾತ್ರ ಹೀಗಾಗಿದ್ದು, ಈ ಸಲ ಹತ್ತಾರು ಜೇನು ಕುಟುಂಬಗಳನ್ನು ಬಲಿ ತೆಗೆದುಕೊಂಡು ಪೂರ್ಣ ನಾಶ ಮಾಡಿದೆ.



ಕೆಲವೆಡೆ ಈಗ ಥ್ಯಾಯಿ ಸ್ಯಾಕ್ ಬ್ರೂಡ್ ಕಾಯಿಲೆ ಬಂದು ಮೊಟ್ಟೆಗಳು ನಾಶವಾಗುತ್ತಿವೆ. ಜೇನು ಕುಟುಂಬವೂ  ಬಡಕಲಾಗುತ್ತದೆ. ಆದರೆ ಈ ಕೇಸರಿ ಇರುವೆ ರಾತ್ರಿ ಬೆಳಗಾಗುವಷ್ಟರಲ್ಲಿ ಜೇನು ಕೃಷಿಕನ ಗಮನಕ್ಕೆ ಬಾರದಂತೆ ಗೂಡನ್ನು ತೆರೆದಾಗ ಗುಂಪು ಗುಂಪಾಗಿ ಬೀಳುತ್ತಿವೆ. ಇದರ ಕಡಿತವು ತೀಕ್ಷ್ಣವಾಗಿದ್ದು ಗೆದ್ದಲುಗಳು ಈ ರೂಪಕ್ಕೆ ಪರಿವರ್ತನೆಗೊಂಡು ಗೂಡಿನ ತುಂಬಾ ತುಂಬಿ ಜೇನು ಹುಳ ಮೊಟ್ಟೆಗಳನ್ನು ಕಬಳಿಸುತ್ತಿವೆ.

ಇರುವೆಗಳಿಗೆ ನೀರು, ಕೀಟ ನಾಶಕಗಳನ್ನು ಹಾಕಿ ಜೇನು ಕುಟುಂಬವನ್ನು ರಕ್ಷಿಸಬಹುದು. ಆದರೆ ಈ ಕೇಸರಿ ಇರುವೆಗೆ ಯಾವುದೇ ಔಷಧ ಇಲ್ಲ. ಮತ್ತೆ ಹೊಸದಾಗಿ ಜೇನು ಕೃಷಿ ಮಾಡುವುದೇ ದಾರಿ ಎನ್ನುವಂತಾಗಿದೆ.